ಆ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಡಿಸೆಂಬರ್ 1994ರಿಂದ ಬೆಂಗಳೂರು (ಗ್ರಾಮಾಂತರ) ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ನಿವಾಸಿಗಳ ಸಲುವಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಇವುಗಳ ಪ್ರಯೋಜನವು ಮಾಗಡಿ ವಿಧಾನಸಭಾ ಕ್ಷೇತ್ರದ ಜನರಿಗೂ ಲಭ್ಯವಾಗಿತ್ತು.

ಇ) ಸಂಸ್ಥೆಯ ಅಧಿಕಾರಿಗಳು ಈ ವರ್ಷವು ಭಾವಿ ಉದ್ದಿಮದಾರರೊಂದಿಗೆ ಪತ್ರ ವ್ಯವಹಾರ ಮತ್ತು ಮುಖಿತಃ ಚರ್ಚೆ ಮಾಡಿ ಸಂಸ್ಥೆಯ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ಒದಗಿಸಿ ಉದ್ಧಿಮೆ ದಾರರನ್ನು ಪ್ರೋತ್ಸಾಹಿಸಿ ಸಾಲ ಸೌಲಭ್ಯಗಳನ್ನು ಒದಗಿಸುತ್ತಾ ಬಂದಿದೆ. ಈ ರೀತಿಯ ಕಾರ್ಯಕ್ರಮಗಳಲ್ಲಿ ಸಂಸ್ಥೆಯ ಹಿರಿಯ ಅಧಿಕಾರಿಗಳು ಹಾಗೂ ಪರಿಣಿತರು ಭಗವಹಿಸಿ ಕೈಗಾರಿಕೆಗಳ ಬಗ್ಗೆ ಸೂಕ್ತ ಮಾಹಿತಿ ನೀಡಿ ರಾಜ್ಯದ ಎಲ್ಲಾ ಪ್ರದೇಶದ ಕೈಗಾರಿಕಾ ಬೆಳವಣಿಗೆಯಲ್ಲಿ ಸಹಾಯಕರಾಗಿದ್ದಾರೆ.

ಕೊಡವ ಭಾಷೆ ಚಲನಚಿತ್ರ ''ಬಾಲ್‌ಪೊಲಂದತ್'' ಕ್ಕೆ ಸಹಾಯ ಧನ

2859:(3849)

ಶ್ರೀ ಹೆಚ್.ಡಿ.ಬಸವರಾಜು (ವಿರಾಜಪೇಟೆ): ಮಾನ್ಯ ಕಾನೂನು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡವ ಭಾಷಾ ಚಲನಚಿತ್ರ 'ಬಾಳ ಪೊಲಂದತ'ಕ್ಕೆ ಸಹಾಯಧನ ಒದಗಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಆ) ಸಹಾಯಧನ ಮಂಜೂರಾಗಿದ್ದಲ್ಲಿ ಎಷ್ಟು ಹಣ ಮಂಜೂರಾಗಿದೆ? ಸಹಾಯಧನ ನೀಡಲು ಸರ್ಕಾರದವರು ಅನುಸರಿಸುವ ಕ್ರಮಗಳೇನು?

ಶ್ರೀ ಎಂ.ಸಿ.ನಾಣಯ್ಯ (ಕಾನೂನು, ವಾರ್ತಾ ಮತ್ತು ಪ್ರಚಾರ ಸಚಿವರು):

ಅ) ಬಾಲ್ ಪೊಲಂದತ ಚಿತ್ರವು ದಿನಾಂಕ: 31-3-98ರಂದು ಸೆನ್ಸಾರ್‌ಗೊಂಡಿದೆ. ದಿನಾಂಕ: 1-4-96ರ ನಂತರ ಸೆನ್ಸಾರ್‌ಗೊಳ್ಳುವ ಚಿತ್ರಗಳಿಗೆ ಸಹಾಯಧನ ಮಂಜೂರು ಮಾಡಲು ಗುಣಾತ್ಮಕ ಆಯ್ಕೆ ಸಲಹಾ ಸಮಿತಿಯನ್ನು ರಚಿಸಲಾಗುತ್ತಿದ್ದು, ಸದರಿ ಸಮಿತಿ ಚಿತ್ರವನ್ನು ವೀಕ್ಷಿಸಿ ಶಿಫಾರಸ್ಸು ಮಾಡಿದ ನಂತರ ಪರಿಶೀಲಿಸಲಾಗುವದು.

ಆ) ಉದ್ಭವಿಸುವುದಿಲ್ಲ.

ದಿನಾಂಕ: 1-4-96ರಿಂದ ಸೆನ್ಸಾರ್‌ಗೊಂಡ ಕನ್ನಡ, ಕೊಡವ, ಕೊಂಕಣಿ, ತುಳು ಮತ್ತು ಲಂಬಾಣಿ ಭಾಷಾ ಚಲನಚಿತ್ರಗಳಿಗೆ ಅವುಗಳ ಗುಣಮಟ್ಟದ ಆಧಾರದ ಮೇಲೆ

ಸಹಾಯಧನ ನೀಡಲಾಗುವುದು. ಈ ದಿಸೆಯಲ್ಲಿ ಒಂದು ಗುಣಾತ್ಮಕ ಆಯ್ಕೆ ಸಲಹಾ ಸಮಿತಿ ರಚಿಸಲಾಗುತ್ತಿದ್ದು, ಸದರಿ ಸಮಿತಿಯು ಚಿತ್ರಗಳನ್ನು ವೀಕ್ಷಿಸಿ, ಸಹಾಯಧನ ಮಂಜೂರು ಮಾಡಲು ಶಿಫಾರಸ್ಸು ಮಾಡಿದ ಚಿತ್ರಗಳಿಗೆ ಮಾತ್ರ ಸಹಾಯಧನ ನೀಡಲು ಕ್ರಮ ಕೈಗೊಳ್ಳಲಾಗುವುದು.

ಬಾದಾಮಿಯ ಗೋವನ ಕೊಪ್ಪ ಕೊಣ್ಣೂರು ಸೇತುವೆ ನಿರ್ಮಾಣ.

2860:(3913)

ಶ್ರೀ ಬಿ.ಜಿ.ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಹೆದ್ದಾರಿ ವ್ಯಾಪ್ತಿಯಲ್ಲಿ ಬರುವ ಗೋವನಕೊಪ್ಪ ಕೊಣ್ಣೂರ ಸೇತುವೆ ಮಲಪ್ರಭಾ ನದಿಯ ಪ್ರವಾಹದಿಂದ ವಾಹನ ಸಂಚಾರಕ್ಕೆ ಹಾಗೂ ವಾಹನ ಮುಳುಗಿ ಪ್ರಾಣ ಹಾನಿಯಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿಯ ತೊಂದರೆ ಈ ಹಿಂದಿನ ವರ್ಷಗಳಿಂದಲೂ ಆಗುತ್ತಿದೆಯೇ/

ಇ) ಹಾಗಿದ್ದಲ್ಲಿ ಈ ವರ್ಷದಲ್ಲಿಯೇ ಈ ಕಾಮಗಾರಿ ಕೈಗೆತ್ತಿಕೊಳ್ಳಲು ಸರ್ಕಾರ ಮಂಜೂರಾತಿ ನೀಡುವರೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಬಿಜಾಪುರ-ಹುಬ್ಬಳ್ಳಿ ರಾಜ್ಯ ಹೆದ್ದಾರಿಯ ಮೇಲೆ ಗೋವನಕೊಪ್ಪ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಲೋ-ಲೆವೆಲ್ ಕಾಜವೇ ಮೇಲೆ ನೀರು ಹರಿಯುವುದರಿಂದ ಮಳೆಗಾಲದಲ್ಲಿ ವಾಹನ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಳ್ಳುತ್ತದೆ. ಪ್ರಾಣಹಾನಿ ಆದ ಬಗ್ಗೆ ವರದಿಗಳು ಬಂದಿರುವುದಿಲ್ಲ.

ಆ) ಸದರಿ ಸೇತುವೆ ಸಂಚಾರಕ್ಕೆ ಉಪಯೋಗದಲ್ಲಿದೆ. ಪ್ರತಿವರ್ಷ ಮಳೆಗಾಲದಲ್ಲಿ ಮಲಪ್ರಭಾ ನದಿಯ ಪ್ರವಾಹದಿಂದ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಳ್ಳುತ್ತದೆ.

ಇ) ಈ ವರ್ಷದ ಆಯವ್ಯಯದಲ್ಲಿ ಯಾವುದೇ ಯೋಜನೆಯಡಿಯಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಕಾರ್ಯಕ್ರಮ ಇರುವುದಿಲ್ಲವಾದರೂ, ಸದರಿ ಸೇತುವೆಯನ್ನು ಎತ್ತರಿಸುವ ಕಾಮಗಾರಿಯನ್ನು ಹುಡ್ಕೋ ಹಣಕಾಸಿನ ನೆರವಿನ ಅಡಿಯಲ್ಲಿ ಕೈಗೆತ್ತಿಕೊಳ್ಳುವ ಕುರಿತು ರೂ.550.00 ಲಕ್ಷಗಳ ಅಂದಾಜಿನ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.